GeethaShishuShikshanaSangha (R)
SIMHA SUBBAMAHALAKSHMI FIRST GRADE COLLEGE
KRS ROAD, MYSURU-570 016

# ಯಶಸ್

**YASHAS** a SSFGC Weekly Newsletter

Volume – 1 Issue No.–9 27th July 2019

## ಧ್ಯಾನದ ಮೂಲಕ ಮನೋ ಒತ್ತಡ ನಿರ್ವಹಣೆ – ವಿಶೇಷ ಉಪನ್ಯಾಸ

## ತನ್ನನ್ನು ತಾನು ತಿಳಿದುಕೊಳ್ಳುವುದೇ ಆಧ್ಯಾತ್ಮ

- **ಪ್ರೊ. ಜಿ. ಚಂದ್ರಶೇಖರ್**




"ಆಧುನಿಕ ಜೀವನ ಮತ್ತು ನಗರ ಬದುಕು ಇಂದು ಹಲವು ಬಗೆಗಳಲ್ಲಿ ಸವಾಲುಗಳನ್ನು ತಂದೊಡ್ಡಿವೆ. ಈ ಸವಾಲುಗಳಿಂದ ಒತ್ತಡಕ್ಕೆ ಒಳಗಾಗುವ ಮನಸ್ಸುಗಳು ಅನೇಕ. ಆದರೆ ಈ ಒತ್ತಡಗಳನ್ನು ನಿರ್ವಹಿಸುವುದಕ್ಕೆ ಹಲವು ಮಾರ್ಗಗಳು ಇವೆ. ಧ್ಯಾನದ ಮೂಲಕ ಮನೋ ಒತ್ತಡವನ್ನು ನಿರ್ವಹಿಸಬಹುದು. ಇದು ಮನೋ ಒತ್ತಡ ನಿರ್ವಹಣೆಗೆ ಅತ್ಯುತ್ತಮವಾದ ಮಾರ್ಗವಾಗಿದೆ. ಧ್ಯಾನವೆಂಬುದು ಆಧ್ಯಾತ್ಮದ ಪ್ರಮುಖ ಭಾಗ. ಆಧ್ಯಾತ್ಮವೆಂದರೆ ತನ್ನನ್ನು ತಾನು ತಿಳಿದುಕೊಳ್ಳುವುದು.. ತನ್ನನ್ನು ತಾನು ಅರಿತುಕೊಳ್ಳುವ ಪ್ರಕ್ರಿಯೆ ಸದಾ ನಡೆಯವಂತಹದು. ಪ್ರತಿಯೊಬ್ಬ ಮನುಷ್ಯ ತನ್ನನ್ನು ತಾನು ಅರಿತುಕೊಂಡರೆ ಅವನ ವ್ಯಕ್ತಿತ್ವ ಸುಂದರವಾಗಿರುತ್ತದೆ" ಎಂದು ದಿನಾಂಕ 23 ಜುಲೈ 2019 ರಂದು ಒತ್ತಡ ನಿರ್ವಹಣೆಯ ಕಾರ್ಯಗಾರದ ಭಾಗವಾಗಿ 'ಧ್ಯಾನದ ಮೂಲ ಮನೋ ಒತ್ತಡ ನಿರ್ವಹಣೆ' ಎಂಬ ವಿಷಯವನ್ನು ಕುರಿತು ಸಿಂಹ ಸುಬ್ಬಮಹಾಲಕ್ಷ್ಮಿ ಕಾಲೇಜಿನ ಹಿಂದಿ ವಿಭಾಗದ ಮುಖ್ಯಸ್ಥರಾದ ಪ್ರೊ. ಜಿ. ಚಂದ್ರಶೇಖರ್ ಅವರು ಮಾತನಾಡಿದರು. ನಂತರ ತನ್ನನ್ನು ತಾನು ಅರಿತುಕೊಳ್ಳುವ ಕ್ರಮದ ಬಗ್ಗೆ ವಿವರಿಸಿದರು. ಒಂದಷ್ಟು ಕಾಲ ನಿಶಬ್ದವಾಗಿದ್ದರೆ ನಿಮ್ಮನ್ನು ನೀವು ಅರಿತುಕೊಳ್ಳಬಹುದು ಎಂಬುದನ್ನು ವಿವರಿಸಿದರು. ವಿದ್ಯಾರ್ಥಿಗಳೊಂದಿಗೆ ಸಂವಾದದ ಭಾಗದಲ್ಲಿ – ಮನೋ ಒತ್ತಡ ನಿರ್ವಹಣೆಗೆ ಸಿಗರೇಟ್, ಕುಡಿತ ಇತರ ಚಟಗಳನ್ನು ರೂಢಿಸಿಕೊಳ್ಳುತ್ತಾರೆ ಏಕೆ? ಎಂದು ತೃತಿಯಾ ಬಿ.ಕಾಂ. ವಿದ್ಯಾರ್ಥಿ ಲಿಖಿತ್ ಬಾಬು ಅವರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಸಿಗರೇಟ್ ಕುಡಿತ ಇವುಗಳಿಂದ ಎಂದಿಗೂ ಮನೋ ಒತ್ತಡ ನಿರ್ವಹಿಸುವುದು ಶುದ್ದಸುಳ್ಳು, ಅವುಗಳಿಂದಲೇ ಇನ್ನೂ ಮನೋ ಒತ್ತಡ ಹೆಚ್ಚುತ್ತಿರುತ್ತದೆ ಎಂದು ವಿವರಿಸಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಬಿ.ಎಸ್. ಸುದೀಪ್ ಅವರು ಕಾರ್ಯಕ್ರಮವನ್ನು ನಿರ್ವಹಿಸಿದರು.

# ಆಗಸ್ಟ್ ತಿಂಗಳ ವಿದ್ಯಾರ್ಥಿ ಸಂಸತ್ತಿಗೆ ಚುನಾವಣೆ



ದಿನಾಂಕ 26 ಜುಲೈ 2019 ರಂದು ಆಗಸ್ಟ್ ತಿಂಗಳ ವಿದ್ಯಾರ್ಥಿ ಸಂಸತ್ತಿಗೆ ಚುನಾವಣೆಯನ್ನು ನಡೆಸಲಾಯಿತು. ಹಿಂದಿನ ತಿಂಗಳಂತೆಯೆ ಆಗಸ್ಟ್ ತಿಂಗಳ ವಿದ್ಯಾರ್ಥಿ ಸಂಸತ್ತನ್ನು ವ್ಯವಸ್ಥಿತವಾಗಿ ರಚಿಸಲಾಯಿತು. ಪ್ರಾಥಮಿಕ ಗುಂಪುಗಳಿಂದ ಗುಂಪಿನ ನಾಯಕರ ಆಯ್ಕೆ, ತರಗತಿ ಹಂತದಲ್ಲಿ ತರಗತಿ ಪ್ರತಿನಿಧಿಗಳ ಆಯ್ಕೆಯಾಗಿ, ಆನಂತರ ಆ ತರಗತಿ ಪ್ರತಿನಿಧಿಗಳು ಕಾಲೇಜಿನ ಹಂತದ ನಾಯಕರ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡರು. ದ್ವಿತೀಯ ಬಿ.ಕಾಂ ವಿದ್ಯಾರ್ಥಿ ದಿನೇಶ್ ಚೌದರಿ, ತೃತೀಯ ಬಿ. ಕಾಂ ವಿದ್ಯಾರ್ಥಿನಿ ಶಾಂತ ನಾದಂ ಅವರು ಉಪ ನಾಯಕರಾದರೆ, ತೃತೀಯ ಬಿ. ಕಾಂ ವಿದ್ಯಾರ್ಥಿ ಚಿರಾಗ್.ಎಸ್ ಪ್ರಧಾನ ನಾಯಕನಾಗಿ ಆಯ್ಕೆಯಾದರು. ಚುನಾವಣೆಯ ನಂತರ ಆಯ್ಕೆಯಾದ ತರಗತಿ ಪ್ರತಿನಿಧಿಗಳು ಮತ್ತು ನಾಯಕರೆಲ್ಲರನ್ನು ನಿರ್ದೇಶಕರು ಮತ್ತು ಪ್ರಾಂಶುಪಾಲರು ಅಭಿನಂದಿಸಿದರು. ಈ ಚುನಾವಣೆಯನ್ನು ಇಂಗ್ಲಿಷ್ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಅನಿಲ್. ಎಂ ಅವರು ವ್ಯವಸ್ಥಿತವಾಗಿ ನಡೆಸಿಕೊಟ್ಟರು. ಆಯಾ ತರಗತಿಯ ಪ್ರಾಧ್ಯಾಪಕರಗಳೆಲ್ಲರು ಸಹಕರಿಸಿದರು.

## Talk to us and know how




"Talk to us and know how" is an education center for training in soft skills. Mushtaq Ahmed and Prithvi, trainers from the center visited the college on 24th July 2019 and spoke on the importance of self-motivation and soft skills. To be successful in one’s own growth one should ask oneself a question, "what do i want to become and why?"

He made students aware of communication skills. He give example of Tony Robbins,a motivational speaker. He asked students to talk; express one self and that would pave a way for one’s own growth and development.

Students wrote what they want to become and why. Mustaq asked them to write how they would feel if they succeeded in achieving their goal and also what if they could not achieve what they wanted. Students were made to visualise and motivate themselves. Anil M, HOD, Department of English, welcomed and them. Students participated actively in the session. Mustaq Ahmed and Prithvi were thanked for their visit.

## An interaction session with Dr.Gunavathi .R



Smt R Gunavathi, Principal, SSFCGC, Mysuru ,was awarded Ph.D Degree on 18th July, 2019 at 4.30 pm by Bharatiar University, Coimbatore. She submitted a thesis on "A Study on Transactional Analysis as a tool in the hands of managers to assess employees to reinforce conducive HR environment in Industries "a Management subject. She spoke about various methods of data collection, research methodology and sources of information for research. She motivated the faculty and the students to take up the Ph.D. Program. She had an interaction session with the students in The Forum on July 22nd, 2019

## To Gather - ಸ್ಮರಣೆ


## ಚಂದ್ರಯಾನ-2




ಚಂದ್ರಯಾನ-2, ಭಾರತೀಯ ಬಾಹ್ಯಾಕಾಶ ಸಂಶೋಧನೆ ಸಂಸ್ಥೆಯ ಸಂಪೂರ್ಣ ದೇಶೀಯ ತಂತ್ರಜ್ಞಾನ ಅಳವಡಿಸಿ ನಿರ್ಮಿಸಿರುವ ಚಾಂದ್ರ ಪರಿಶೋಧನಾ ಅಭಿಯಾನ. 22 ಜುಲೈ 2019 ರ ಅಪರಾಹ್ನ 2 ಗಂಟೆ 43 ನಿಮಿಷ ಭಾರತೀಯ ಕಾಲಮಾನಕ್ಕೆ ಆಂಧ್ರಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಜಿಯೋಸಿಂಕ್ರೋನಸ್ ಸ್ಯಾಟಲೈಟ್ ಲಾಂಚ್ ವೆಹಿಕಲ್ ಮಾರ್ಕ್ 3 (ಜಿ ಎಸ್ ಎಲ್ ವಿ ಎಂಕೆ 3-ಎಂ1 ) ರಾಕೆಟ್ ಮೂಲಕ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು.


ಇಸ್ರೋದ ಮಹತ್ವಾಕಾಂಕ್ಷೆಯ ಯೋಜನೆಯ ಭಾಗವಾಗಿ ಒಂದು ಚಾಂದ್ರ ಕಕ್ಷೆಗಾಮಿ, ರೋವರ್ ಹಾಗು ಒಂದು ಭೂಸ್ಪರ್ಶಕ ಒಳಗೊಂಡಿರುವ ಇದು ಸೆಪ್ಟೆಂಬರ್ ವೇಳೆಗೆ ಚಂದ್ರನ ದಕ್ಷಿಣ ದ್ರುವಕ್ಕೆ ಇಳಿಯುವ ಯೋಜನೆ ಇದೆ. ಚಂದ್ರನ ದಕ್ಷಿಣ ಧ್ರುವ ಪ್ರದೇಶಕ್ಕೆ ಭೂಸ್ಪರ್ಶಕವನ್ನು ಇಳಿಸುವ ಮೊಟ್ಟ ಮೊದಲ ಯೋಜನೆ ಇದಾಗಿದೆ. ಇದಕ್ಕೆ ತಗಲುವ ವೆಚ್ಚ ಸುಮಾರು ₹425 ಕೋಟಿ ಎಂದು ಅಂದಾಜಿಸಲಾಗಿದೆ. ಇಸ್ರೋ ಪ್ರಕಾರ, ಈ ಅಭಿಯಾನವು ವಿವಿಧ ಹೊಸ ತಂತ್ರಜ್ಞಾನಗಳನ್ನು ಪರೀಕ್ಷಿಸಿ ಬಳಕೆಮಾಡುವುದರ ಜೊತೆಗೆ 'ಹೊಸ' ಪ್ರಯೋಗಗಳನ್ನು ನಡೆಸುತ್ತದೆ. ಗಾಲಿಗಳಿರುವ ರೋವರ್ ಚಂದ್ರನ ಮೇಲ್ಮೈ ತಲುಪಿ, ಆ ಸ್ಥಳದ ರಾಸಾಯನಿಕ ವಿಶ್ಲೇಷಣೆ ನಡೆಸಲು ಮಣ್ಣು ಅಥವಾ ಶಿಲೆಯ ಮಾದರಿಯನ್ನು ಸಂಗ್ರಹಿಸುತ್ತದೆ. ಅಲ್ಲಿನ ಅಗತ್ಯ ಅಂಕಿ ಅಂಶದ ದತ್ತಾಂಶವನ್ನು ಭೂಮಿಗೆ ಚಂದ್ರಯಾನ-2 ಕಕ್ಷೆಗಾಮಿಯ ಮೂಲಕ ತಲುಪಿಸಲಾಗುತ್ತದೆ. ಚಂದ್ರಯಾನ-1 ಅಭಿಯಾನದ ಯಶಸ್ಸಿಗೆ ಕಾರಣರಾದ ಮೈಲ್ಸ್ವಾಮಿ ಅಣ್ಣಾದೊರೈ ನೇತೃತ್ವದ ತಂಡವು ಚಂದ್ರಯಾನ-2 ಅಭಿಯಾನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಭಾರತೀಯ ಬಾಹ್ಯಾಕಾಶ ಸಂಶೋಧನೆಯ ಸಂಸ್ಥೆಯ ಈ ಸಾಧನೆಯನ್ನು 23 ಜುಲೈ 2019 ರಂದು ಟು ಗ್ಯಾದರ್ ನಲ್ಲಿ ಸ್ಮರಿಸಿ ಅಭಿನಂದನೆ ಸಲ್ಲಿಸಲಾಯಿತು.

# ಬಾಲಗಂಗಾಧರ ತಿಲಕ



23 ಜುಲೈ 2019 ರಂದು ದೈನಂದಿನ ಟು ಗ್ಯಾದರ್‌ನಲ್ಲಿ ಲೋಕಮಾನ್ಯ ತಿಲಕ ಜನ್ಮದಿನದ ಅಂಗವಾಗಿ ಅವರ ವ್ಯಕ್ತಿತ್ವ ಮತ್ತು ಸಾಧನೆಯನ್ನು ಸ್ಮರಿಸಲಾಯಿತು. ಲೋಕಮಾನ್ಯ ಬಾಲ ಗಂಗಾಧರ ತಿಲಕ (೨೩.೦೭.೧೮೫೬ – ೦೧.೦೮.೧೯೨೦) ಭಾರತೀಯ ರಾಷ್ಟ್ರೀಯವಾದಿ, ಸಮಾಜ ಸುಧಾರಕ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ತಿಲಕರು ಭಾರತದ ಸ್ವಾತಂತ್ರ್ಯ ಹೋರಾಟದ ಚಳುವಳಿಯ ಮೊದಲನೇ ಜನಪ್ರಿಯ ನಾಯಕ. ಭಾರತೀಯರ ಪ್ರಜ್ಞೆಯಲ್ಲಿ ಸಂಪೂರ್ಣ ಸ್ವರಾಜ್ಯದ ಕಿಚ್ಚು ಹಚ್ಚಿದ ತಿಲಕರು ಹಿಂದೂ ರಾಷ್ಟ್ರೀಯತಾವಾದದ ಪಿತಾಮಹ ಎಂದೂ ಹೆಸರಾಗಿದ್ದಾರೆ. ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು, ಅದನ್ನು ನಾನು ಪಡೆದೇ ತೀರುತ್ತೇನೆ ಎಂಬ ಇವರ ಘರ್ಜನೆ ಅಂದು ಜನಪ್ರಿಯವಾದದ್ದಷ್ಟೇ ಅಲ್ಲ, ಇಂದಿಗೂ ಜನ ಸಾಮಾನ್ಯರ ನೆನಪಿನಲ್ಲಿ ಹಸುರಾಗಿದೆ. "ಲೋಕಮಾನ್ಯ" (ಜನಗಳ ಪ್ರೀತಿ ಪಾತ್ರರು/ ರವಕ್ಕೆ ಪಾತ್ರರಾದವರು) ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ತಿಲಕರು ಭಾರತದ ಇತಿಹಾಸ, ಸಂಸ್ಕೃತ, ಹಿಂದೂ ಧರ್ಮ, ಗಣಿತ ಹಾಗೂ ಖಗೋಳ ಶಾಸ್ತ್ರಗಳ ಆಳವಾದ ಅಭ್ಯಾಸ ಮಾಡಿದ್ದರು.

# ಚಂದ್ರಶೇಖರ ಆಜಾದ್



23 ಜುಲೈ 2019 ರಂದು ದೈನಂದಿನ ಟು ಗ್ಯಾದರ್ ನಲ್ಲಿ ಚಂದ್ರಶೇಖರ ಆಜಾದ್ ಅವರ ಜನ್ಮ ದಿನದ ಅಂಗವಾಗಿ ಅವರ ವ್ಯಕ್ತಿತ್ವ ಮತ್ತು ಅವರ ಸಾಧನೆಯನ್ನು ಸ್ಮರಿಸಲಾಯಿತು. ಚಂದ್ರಶೇಖರ ಆಜಾದ್ ಎಂದೇ ಹೆಚ್ಚು ಗುರುತಿಸಲ್ಪಡುವ ಚಂದ್ರಶೇಖರ ಸೀತಾರಾಮ್ ತಿವಾರಿ ಯವರು (ಜುಲೈ 23, 1906 ರಲ್ಲಿ ಜನನ – ಫೆಬ್ರುವರಿ 27, 1931 ರಲ್ಲಿ ಮರಣ) ಭಾರತದ ಬಹು ಪ್ರಮುಖ ಕ್ರಾಂತಿಕಾರಿಗಳಲ್ಲಿ ಒಬ್ಬರಾಗಿದ್ದು, ಅವರನ್ನು ಭಗತ್ ಸಿಂಗ್ ರ ಮಾರ್ಗದರ್ಶಕರೆಂದು, ಗುರುಗಳೆಂದು ಪರಿಗಣಿಸಲಾಗುತ್ತದೆ. ಪಂಡಿತ್‌ಜಿ ಎಂದು ಆಗ್ಗಾಗ್ಗೆ ಕರೆಯಲ್ಪಡುತ್ತಿದ್ದ ಆಜಾದ್‌ರವರು ಓರ್ವ ಕ್ರಾಂತಿಕಾರಿಯಾಗಿದ್ದರು. 1857ರ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಆಡಳಿತದ ವಿರುದ್ಧದ ತಮ್ಮ ಸ್ವಾತಂತ್ರ್ಯಕ್ಕಾಗಿನ ಹೋರಾಟದಲ್ಲಿ ಆಯುಧಗಳನ್ನು ಬಳಸಿದ್ದ ಮೊದಲ ಭಾರತೀಯ ಕ್ರಾಂತಿಕಾರಿಗಳಲ್ಲಿ ಅವರು ಒಬ್ಬರಾಗಿದ್ದರು. ಓರ್ವ ಯೋಧ ಎಂದಿಗೂ ಶಸ್ತ್ರವನ್ನು ತ್ಯಜಿಸಲಾರನೆಂಬುದು ಕೂಡಾ ಅವರ ಅಭಿಪ್ರಾಯವಾಗಿತ್ತು.

# ಕಾರ್ಗಿಲ್ ವಿಜಯೋತ್ಸವ ದಿನ



26 ಜುಲೈ 2019 ರಂದು ದೈನಂದಿನ ಟು ಗ್ಯಾದರ್‌ನಲ್ಲಿ 20ನೇ ವರ್ಷದ ಕಾರ್ಗಿಲ್ ವಿಜಯೋತ್ಸವದ ದಿನವನ್ನು ಆಚರಿಸಲಾಯಿತು. ವೀರ ಸೈನಿಕರ ತ್ಯಾಗ ಮತ್ತು ಬಲಿದಾನವನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಂಡು ಪಾಕ್ ವಿರುದ್ದ ಇದೇ ದಿನ 1999 ರಲ್ಲಿ ನಮ್ಮ ದೇಶದ ಗಡಿ ಕಾಯುವ ಯೋಧರು ಯುದ್ದ ಜಯಿಸಿದ್ದನ್ನು

ಅಭಿನಂದಿಸಲಾಯಿತು. ಕಾರ್ಗಿಲ್ ಸಂಘರ್ಷವೆಂದೇ ಹೆಸರಾದ ಕಾರ್ಗಿಲ್ ಯುದ್ದವು ಭಾರತ ಮತ್ತು ಪಾಕಿಸ್ತಾನದ ಮಧ್ಯೆ ನಡೆದ ಸಶಸ್ತ್ರ ಸಂಘರ್ಷವಾಗಿದ್ದು, ಕಾಶ್ಮೀರದ ಕಾರ್ಗಿಲ್ ಜಿಲ್ಲೆ ಮತ್ತು ನಿಯಂತ್ರಣ ರೇಖೆಯಿರುವ ಪ್ರದೇಶಗಳಲ್ಲಿ 1999 ರ ಮೇ ಮತ್ತು ಜುಲೈ ನಡುವೆ ಸಂಭವಿಸಿತು. ಉಭಯ ರಾಷ್ಟ್ರಗಳ ನಡುವಿನ ಗಡಿಯಾಗಿರುವ ನಿಯಂತ್ರಣ ರೇಖೆಯಲ್ಲಿ (ಐಒಅ) ರುವ ಭಾರತದ ನೆಲೆಗಳಿಗೆ ಪಾಕಿಸ್ತಾನದ ಸೈನಿಕರು ಮತ್ತು ಕಾಶ್ಮೀರಿ ಉಗ್ರಗಾಮಿಗಳು ನುಸುಳಿದ್ದೇ ಯುದ್ಧಕ್ಕೆ ಕಾರಣವಾಯಿತು.

## ಅಭಿನಂದನೆ



ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಬಿ. ಎಸ್. ಸುದೀಪ್ ಅವರು ಜಮಾಅತೆ ಇಸ್ಲಾಮೀ ಹಿಂದ್, ಮೈಸೂರು ಇವರು ಆಯೋಜಿಸಿದ್ದ 'ಪ್ರವಾದಿ ಮುಹಮ್ಮದ್ (ಸ) ಮಾನವ ಕುಲದ ಶ್ರೇಷ್ಠ ಮಾರ್ಗದರ್ಶಕ' ಎಂಬ ವಿಷಯದ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ ಕರ್ನಾಟಕದ ಶಿಕ್ಷಕರ ವಿಭಾಗದಲ್ಲಿ ಐದು ಸಾವಿರ ರೂ.ಗಳ ನಗದು ರೂಪದ ಮೊದಲನೆಯ ಬಹುಮಾನವನ್ನು ಮತ್ತು ನೆನಪಿನ ಕಾಣಿಕೆಯನ್ನು ಪಡೆದುಕೊಂಡಿದ್ದಾರೆ. ಅವರಿಗೆ ಕಾಲೇಜು ಟು ಗ್ಯಾದರ್ ನಲ್ಲಿ ಅಭಿನಂದಿಸಿತ್ತು.

## *ಯಶಸ್ – ಕಾವ್ಯ*

### ಪ್ರೀತಿಯ ಕನಸು – ನನಸು (ಕವನ)

– ಕುಮಾರ್. ಆರ್, ದ್ವಿತೀಯ ಬಿ.ಕಾಂ ವಿದ್ಯಾರ್ಥಿ



**ಒ**ಮ್ಮೆ ನಿನ್ನನ್ನು ನೋಡಿದೆ
ನನ್ನ ಹೃದಯದಲ್ಲಿ ನಿನಗಾಗಿ ಸ್ಥಾನ ನೀಡಿಬಿಟ್ಟೆ
ಅಂದು ನನ್ನ ಮನಸೊಳಗಿರುವ
ಪ್ರೀತಿ ಎಂಬ ಮುತ್ತುಗಳು
ನಿನ್ನನ್ನು ನೋಡಿ ಕಂಗೊಳಿಸುತ್ತಿದೆ

ನಿನ್ನನ್ನು ಮೊದಲನೆ ಬಾರಿ ನೋಡಿದ ನಂತರ
ನನ್ನ ಮನಸೊಳಗೆ ಏನೋ ಒಂದು
ಬದಲಾವಣೆ ಆಯಿತ್ತು.
ಒಮ್ಮೆ ನೀನು ನಕ್ಕರೆ, ಬೆಳ್ಳಗಿರುವ ಹಾಲು ಸಕ್ಕರೆಯಂತೆ

ಇದೇ ಭಾವದಲ್ಲಿ
ವರ್ಷನಲ್ಲಿದ್ದ ಕನಸುಗಳನ್ನು
ನನ್ನಲ್ಲಿರುವ ಕನಸೇ ಎಂದು ತಿಳಿದುಕೊಂಡು
ಅವಳ ಕನಸನ್ನು ನನಸ್ಸು ಮಾಡಿ,
ವರ್ಷನಿಂದ ಕಳೆದೆ ವರ್ಷಗಳನ್ನು

ಇದು ಪ್ರೀತಿಯ ಕನಸೋ – ನನಸೋ
ಹುಚ್ಚಾಟದ ಭ್ರಮೆಯೋ? ತಿಳಿಯದು
ಆದರೂ ಪ್ರೀತಿ ಅತಿಮಧುರ

# ರಾಷ್ಟ್ರೀಯ ಸೇವಾ ಯೋಜನೆಯಿಂದ ಗುಂಪು ಚರ್ಚೆ




27 ಜುಲೈ 2019 ರ ಶನಿವಾರ ಮಧ್ಯಾಹ್ನ 12.30 ರಿಂದ 1.30ರವರೆಗೆ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ದೈನಂದಿನ ಕಾರ್ಯಕ್ರಮದ ಭಾಗವಾಗಿ ಕಾಲೇಜಿನಲ್ಲಿ ವಿವಿಧ ವಿಷಯಗಳನ್ನು ಕುರಿತ ಗುಂಪು ಚರ್ಚೆ ನಡೆಸಿದರು. ಸಾಮಾಜಿಕ ಜಾಲತಾಣಗಳ ಬಳಕೆ, ಮಹಿಳಾ ಸಬಲೀಕರಣ, ಮೋದಿ ಸರಕಾರ, ಇತ್ಯಾದಿ ವಿಷಯಗಳ ಕುರಿತು ಚರ್ಚಿಸಿದ ವಿದ್ಯಾರ್ಥಿಗಳು ಸಂವಾದದ ಮೂಲಕ ವಿಷಯಗಳನ್ನು ತಾತ್ವಿಕವಾಗಿ ವಿವರಿಸಿದರು. ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಧಿಕಾರಿಗಳಾದ ಕು.ಪ್ರಿಯಾಂಕ ಎಂ. ಎನ್ ಅವರು ಇದನ್ನು ನಡೆಸಿಕೊಟ್ಟರು. ವಿದ್ಯಾರ್ಥಿಗಳು ಮತ್ತು ಕಾಲೇಜಿನ ಪ್ರಾಧ್ಯಾಪಕರೆಲ್ಲರು ಉಪಸ್ಥಿತರಿದ್ದರು.

## India of My Dreams - M. K. Gandhi

*I feel that India's mission is different from that of others. India is fitted for the religious supremacy of the world. There is no parallel in the world for the process of purification that this country has voluntarily undergone. India is less in need of steel weapons, it has fought with divine weapons, it can still do so. Other nations have been votaries of brute force. The terrible war going on in Europe furnishes a forcible illustration of the truth. India can win all by soul force. History supplies numerous instances to prove that brute force is as nothing before soul force. Poets have sung about it and seers have described their experiences.*

***Speeches and writings of Mahatma Gandhi, p. 405***

## Photo Corner



**ವರದಿಗಾರರು**
ಡಾ. ಬಿ. ಎಸ್. ಸುದೀಪ್, ಮುಖ್ಯಸ್ಥರು, ಕನ್ನಡ ವಿಭಾಗ

**ಛಾಯಾಚಿತ್ರ ಕೃಪೆ**
ಡಾ. ಪ್ರಭಾಕರ ಕೆ. ವಿ. ನಿರ್ದೇಶಕರು
ಡಾ. ಬಿ. ಎಸ್. ಸುದೀಪ್, ಮುಖ್ಯಸ್ಥರು, ಕನ್ನಡ ವಿಭಾಗ
ಶ್ರೀ ಅನಿಲ್. ಎಂ, ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಕು.ಪ್ರಿಯಾಂಕ.ಎಂ.ಎನ್, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ